ಎಂ ವಿ ಸಿ ನಂಃ 866/2023
ಪಿ. ಡಬ್ಲ್ಯೂ-1

**(ಇಂದು ದಿನಾಂಕ 06-02-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಖ್ಯವಿಚಾರಣೆಃ ಅರ್ಜಿದಾರರ ಪರ ಶ್ರೀ ಎಂ ಎಂ ಎಂ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ . ನಾನು ಈ ಅರ್ಜಿಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯ ಗುರುತಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು .

| **ಕ್ರ. ಸಂ.** | **ದಾಖಲೆಗಳ ನಮೂನೆ** | **ನಿಶಾನೆ** |
|---|---|---|
| 1 | ಪ್ರಥಮ ವರ್ತಮಾನ ವರದಿಯ ದೃಡಿಕೃತ ಪ್ರತಿ | ನಿ.ಪಿ-1 |
| 2 | ದೂರಿನ ದೃಡಿಕೃತ ಪ್ರತಿ | ನಿ.ಪಿ-2 |
| 3 | ದೋಷಾರೋಪಣ ಪತ್ರದ ದೃಡಿಕೃತ ಪ್ರತಿ | ನಿ.ಪಿ-3 |
| 4 | ಅಪಘಾತ ಸ್ಥಳದ ಪಂಚನಾಮೆ ದೃಡಿಕೃತ ಪ್ರತಿ | ನಿ.ಪಿ-4 |
| 5 | ವಾಹನ ಜಪ್ತಿ ಪಂಚನಾಮೆಯ ದೃಡಿಕೃತ ಪ್ರತಿ | ನಿ.ಪಿ-5 |
| 6 | ಮೋಟರ ವಾಹನ ನಿರೀಕ್ಷರ ವರದಿಯ ದೃಡಿಕೃತ ಪ್ರತಿ | ನಿ.ಪಿ-6 |
| 7 | ಕಿಮ್ಸ್ ಆಸ್ಪತ್ರೆಯವರು ನೀಡಿದ ಪತ್ರ ಹಾಗೂ ಮೇಡಿಕೋ ಲಿಗಲ್ ಸರ್ಟಿಫಿಕೇಟ್ (ಒಟ್ಟು 3 ದಾಖಲೆಗಳು) | ನಿ.ಪಿ-7 |
| 8 | 21 ಮೇಡಿಕಲ್ ಬಿಲ್ಲುಗಳು | ನಿ.ಪಿ-8 |
| 9 | ಡಿಸಚಾರ್ಜ ಕಾರ್ಡ | ನಿ.ಪಿ-9 |
| 10 | 12 ಔಷಧಿ ಚೀಟಿಗಳು | ನಿ.ಪಿ-10 |

**ಪಾಟೀಸವಾಲುಃ 1 ನೇ ಎದುರುದಾರರ ಪರ ಶ್ರೀ ಎಸ್ ಎಚ್ ಎಂ ವಕೀಲರಿಂದ**

**1 ನೇ ಎದುರುದಾರರ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು . ಗೈರು ಹಾಜರು ಇದ್ದಾರೆ , ಕೊರಿಕೆ ಇಲ್ಲ , ಕಾರಣ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು .**

ಎಂ ವಿ ಸಿ ನಂಃ 866/2023
ಪಿ. ಡಬ್ಲ್ಯೂ-1

**ಪಾಟೀಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್ ಬಿ ಎಸ್ ವಕೀಲರಿಂದ**

ನಾನು ಮೊದಲನೆ ವರ್ಷದ ಪಿ.ಯು.ಸಿ ಮುಗಿಸಿರುತ್ತೇನೆ . ನಾನು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆನೆ . ಅಪಘಾತದ ದಿನ ನಾನು ನನ್ನ ಕೆಲಸಕ್ಕೆ ಹೋಗಿರಲಿಲ್ಲ . ನನ್ನ ಕರ್ತವ್ಯದ ಅವಧಿ ಬೆಃ 6.00 ರಿಂದ ಮಃ 3.30 ವರೆಗೆ ಇರುತ್ತದೆ. 2 ನೇ ಶಿಫ್ಟ್ ಮಃ 3.30 ರಿಂದ ರಾಃ 12.00 ವರೆಗೆ ಇರುತ್ತದೆ.

ಅಪಘಾತದ ದಿನ ನಾನು 2 ನೇ ಶಿಫ್ಟಗೆ ಕೆಲಸಕ್ಕೆ ಹೋಗಬೇಕಾಗಿತ್ತು ಎಂದು ತೊರಿಸುವ ದಾಖಲೆಗಳನ್ನು ಹಾಜರುಪಡಿಸಿಲ್ಲ . ನನ್ನ ಉದ್ಯೋಗ , ಪಗಾರ ಹಾಗೂ ನನ್ನ ವಯಸ್ಸನ್ನು ತೊರಿಸುವ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ . ಅಪಘಾತದ ಸಮಯದಲ್ಲಿ ನಾನು ಮೊದಲನೆ ವರ್ಷದ ಪಿ.ಯು.ಸಿ ಓದುತ್ತಿದ್ದೆ . ನನ್ನ ಅಜ್ಜಿಯ ಹೆಸರಿಗೆ ಖರೀದಿ ಮಾಡಿದ ಮೋಟರ ಸೈಕಲನಲ್ಲಿ ನಾನು ಸಂಚಾರ ಮಾಡುತ್ತಿದ್ದೆ . ನಾನು ಮೊದಲನೆ ವರ್ಷದ ಪಿ.ಯು.ಸಿ ಓದುತ್ತಿದ್ದ ಸಮಯದಲ್ಲಿ ಅಲ್ಪವಯಿ ಎಂದರೆ ಸರಿ . ನನ್ನ ಜೊತೆ ಮೋಟರ ಸೈಕಲಿನಲ್ಲಿ ಕುಳಿತಿದ್ದ ವ್ಯಕ್ತಿಯ ಹೆಸರು ರಾಜು ಬಡಿಗೇರ . ಅಪಘಾತದ ಸಮಯದಲ್ಲಿ ಮೋಟರ ಸೈಕಲನ್ನು ನಾನು ಚಲಾಯಿಸುತ್ತಿದ್ದೆ . ನಿಯಮಗಳ ಪ್ರಕಾರ ಯಾವುದೇ ಮೋಟರ ವಾಹನಗಳನ್ನು ಚಲಾಯಿಸಲು ಕಾನೂನು ಬದ್ದ ಚಾಲನಾ ಪರವಾನಿಗೆ ಇರಬೇಕು ಎಂದರೆ ಸರಿ . ಒಬ್ಬ ವ್ಯಕ್ತಿ ಅಲ್ಪವಯಿಯಾಗಿ ಹಾಗೂ ಅಧಿಕೃತ ಚಾಲನಾ ಪರವಾನಿಗೆ ಇಲ್ಲದೇ ಸಾರ್ವಜನಿಕ ಸ್ಥಳ ಮತ್ತು ರಸ್ತೆಯಲ್ಲಿ ಮೋಟಾರು ವಾಹನ ಚಾಲನೆ ಮಾಡುವುದು ಅಪರಾಧ ಎಂದರೆ ಸರಿ . ಅಪಘಾತದ ಸಮಯದಲ್ಲಿ ನಾನು ಚಲಾಯಿಸುತ್ತಿದ್ದ ಮೋಟರ ಸೈಕಲಗೆ ವಿಮೆ ಇತ್ತು . ಸದರಿ ಮೋಟರ ಸೈಕಲಿನ ನೊಂದಣಿ ಪ್ರಮಾಣ ಪತ್ರ ಹಾಗೂ ವಿಮಾ ಪತ್ರವನ್ನು ಈ ಅರ್ಜಿಯಲ್ಲಿ ಹಾಜರುಪಡಿಸಿಲ್ಲ . ಸದರಿ ದಾಖಲೆಗಳನ್ನು ಈ ಅರ್ಜಿಯಲ್ಲಿ ಹಾಜರುಪಡಿಸಲು ತೊಂದರೆ ಏನು ಇಲ್ಲ ಎಂದರೆ ಸರಿ .

ಅಪಘಾತದ ದಿನ ನಾನು ಧಾರವಾಡ ಶಹರದ ಶಿವಾಜಿ ಸರ್ಕಲಿನಿಂದ ಓಲ್ಡ ಎಸ್ ಪಿ

ಆಫೀಸ್ ಸರ್ಕಲ್ ಕಡೆ ಪ್ರಯಾಣಿಸುತ್ತಿದ್ದೆ . ಶಿವಾಜಿ ಸರ್ಕಲಿನಲ್ಲಿ ಒಟ್ಟು 5 ರಸ್ತೆಗಳು ಸೇರಿಕೊಳ್ಳುತ್ತವೆ ಎಂದರೆ ಸರಿ . ಶಿವಾಜಿ ಸರ್ಕಲಿನಿಂದ ಓಲ್ಡ ಎಸ್ ಪಿ ಆಫೀಸ್ ಸರ್ಕಲ್ ವರೆಗೆ ಯಾವಾಗಲೂ ವಾಹನಗಳು ತುಂಬಾ ಓಡಾಡುತ್ತಿರುತ್ತವೆ ಎಂದರೆ ಸರಿ . ಓಲ್ಡ ಎಸ್ ಪಿ ಆಫೀಸ್ ಸರ್ಕಲನಲ್ಲಿಯೂ ಸಹ ಒಟ್ಟು 5 ರಸ್ತೆಗಳು ಕೂಡುತ್ತವೆ ಎಂದರೆ ಸರಿ . ಓಲ್ಡ ಎಸ್ ಪಿ ಆಫೀಸ್ ಸರ್ಕಲ್ ನಲ್ಲಿ ಒಬ್ಬ ಟ್ರಾಫೀಕ್ ಪೇದೆ ಹಾಗೂ ಟ್ರಾಫೀಕ್ ಸಿಗ್ನಲ್ ಇದೆ ಎಂದರೆ ಸರಿ . ಧಾರವಾಡದ ಹಳೇ ಬಸ್ ನಿಲ್ದಾಣದಿಂದ ಚಿಕ್ಕಮಲ್ಲಿಗವಾಡ ಗ್ರಾಮ 07 ಕಿ.ಮೀಟರ ಅಂತರದಲ್ಲಿದೆ . ನಾನು ಶಿವಾಜಿ ಸರ್ಕಲ್ ಕಡೆಯಿಂದ ಬಂದು ಓಲ್ಡ ಎಸ್ ಪಿ ಆಫೀಸ್ ಸರ್ಕಲ್ ನಲ್ಲಿ ಬಲಗಡೆ ವಾಹನ ತಿರುವು ತೆಗೆದುಕೊಳ್ಳಬೇಕಾಗಿತ್ತು ಎಂದರೆ ಸರಿ . ಸದರಿ ದಿನ ನನ್ನ ಕರ್ತವ್ಯದ ಅವಧಿ 2 ನೇ ಶಿಫ್ಟ ಅಂದರೆ ಮಃ 3.30 ಕ್ಕೆ ಇತ್ತು ಎಂದರೆ ಸರಿ . ಓಲ್ಡ ಎಸ್ ಪಿ ಆಫೀಸ್ ಸರ್ಕಲ್ ಯಾವಾಗಲೂ ವಾಹನಗಳಿಂದ ಕೂಡಿದ ಸರ್ಕಲ್ ಎಂದರೆ ಸರಿ . ಮತ್ತೊಂದು ವಾಹನವು ಓಲ್ಡ ಎಸ್ ಪಿ ಆಫೀಸ್ ಸರ್ಕಲ್ ನಲ್ಲಿ ಸಿಗ್ನಲ್ ದಾಟಿ ಬರುತ್ತಿತ್ತು . ಮರಾಠಾ ಕಾಲೋನಿಯಿಂದ ಓಲ್ಡ ಎಸ್ ಪಿ ಕಡೆ ಬರುವಾಗ ಸರ್ಕಲಿನಲ್ಲಿ ರಸ್ತೆಯ ಬಲಬದಿಗೆ ಅಪಘಾತವಾಗಿದೆ ಎಂದರೆ ಸರಿ .

ಅಪಘಾತದ ಪರಿಣಾಮ ಎಡಗೈ ಮತ್ತು ಎಡಗಾಲಿಗೆ ಪೆಟ್ಟಾಗಿತ್ತು . ಅಪಘಾತವಾದಾಗ ಸಮಯ ಅಃ 1.30 ಆಗಿರಬಹುದು . ಅಪಘಾತದ ನಂತರ ಮೊದಲು ನನ್ನನ್ನು ಸಿವಿಲ್ ಆಸ್ಪತ್ರೆಗೆ ದಾಖಲಿಸಿದರು . ಆ ಸಮಯದಲ್ಲಿ ನನಗೆ ಪ್ರಜ್ಞೆ ಇರಲಿಲ್ಲ . ನನಗೆ ಪ್ರಜ್ಞೆ ಬಂದ ನಂತರ ವೈದ್ಯರಿಗೆ ಅಪಘಾತದ ಕುರಿತು ಮಾಹಿತಿ ನೀಡಿಲ್ಲ . ಸಿವಿಲ್ ಆಸ್ಪತ್ರೆಯಲ್ಲಿ 7-8 ದಿನಗಳು ಇದ್ದೆ . ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಪೊಲೀಸರು ಅಲ್ಲಿಗೆ ಬಂದಿದ್ದರು ಎಂದರೆ ಸರಿ . ಸದರಿ ಪೊಲೀಸರಿಗೆ ನಾನು ದೂರು ನೀಡಿಲ್ಲ . ಪೊಲೀಸರು ನನ್ನ ಕಡೆಯಿಂದ ಹೇಳಿಕೆ ಪಡೆಯಲಿಲ್ಲ . ನಾನು ಸುಲ್ತಾನಪುರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದೆ . ಅಲ್ಲಿನ ವೈದ್ಯರಿಗೆ ನನಗೆ ಗಾಯವಾದ ಬಗ್ಗೆ ಹೇಳಲಿಲ್ಲ . ಸದರಿ ಆಸ್ಪತ್ರೆಯಲ್ಲಿ ನಾನು ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದೆನೆ . ಅಲ್ಲಿ ನನ್ನ ಗಾಯಗಳ ಕುರಿತು ಎಕ್ಸರೇ ತೆಗೆದಿದ್ದಾರೆ . ಸದರಿ ದಾಖಲೆಗಳನ್ನು ಈ ಅರ್ಜಿಯಲ್ಲಿ ಹಾಜರುಪಡಿಸಿಲ್ಲ . ಸುಲ್ತಾನಪುರಿ ಆಸ್ಪತ್ರೆಯವರು ನನಗೆ ಔಷಧಿಗಳನ್ನು ಶಿಫಾರಸ್ಸು ಮಾಡುವಾಗ

ಅವುಗಳನ್ನು ಬರೆದುಕೊಡುತ್ತಿದ್ದರು ಎಂದರೆ ಸರಿ . ನಾನು ಸುಲ್ತಾನಪುರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖವಾದ ನಂತರ ನನ್ನ ಹೆಚ್ಚಿನ ಔಷಧಿ ಬರೆದುಕೊಟ್ಟು ದವಾಖಾನೆಯಿಂದ ಬಿಡುಗಡೆ ಮಾಡಿದರು ಎಂದರೆ ಸರಿ . ಪುನಃ ನಾನು ಸದರಿ ಆಸ್ಪತ್ರೆಗೆ 7-8 ಬಾರಿ ಬ್ಯಾಂಡೇಜ್ ಬಿಚ್ಚಿಸಿಕೊಳ್ಳಲು ಹೋಗಿದ್ದೆನೆ . ಆ 7-8 ಬಾರಿ ಅಪಘಾತವಾದ ಮೂರು ತಿಂಗಳ ಒಳಗೆ ಆಸ್ಪತ್ರೆಗೆ ಹೋಗಿದ್ದೆನೆ ಎಂದರೆ ಸರಿ . ನಂತರ ನಾನು ಇಲ್ಲಿನವರೆಗೆ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿ . ಸಾಕ್ಷಿಯು ಆಗಾಗ್ಗ ಚಿಕಿತ್ಸೆ ಪಡೆಯುತ್ತೇನೆ ಎಂದು ಹೇಳುತ್ತಾರೆ . ನಾನು ಆಗಾಗ್ಗ ಚಿಕಿತ್ಸೆ ಪಡೆದ ಬಗ್ಗ ಯಾವುದೇ ದಾಖಲೆಗಳನ್ನು ಇಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ .

ನಾನು ಕೆಲಸ ಮಾಡುವ ಸಂಸ್ಥೆಯಲ್ಲಿ ಅಲ್ಲಿನ ಕಾರ್ಮಿಕರಿಗೆ ಮೆಡಿಕಲ್ ಸೌಲಭ್ಯ ಇದೆ ಎಂದರೆ ಸರಿ . ಆ ರೀತಿ ನಾನು ಸೌಲಭ್ಯ ಪಡೆದಿಲ್ಲ . ಆ ರಿತೀಯ ಸೌಲಭ್ಯ ನಾನು ಪಡೆದಿದ್ದರೂ ಪಡೆದಿಲ್ಲ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ . ಓಲ್ಡ ಎಸ್ ಪಿ ಆಫೀಸ್ ಸರ್ಕಲ್ ನಿಂದ ಶಿವಾಜಿ ಸರ್ಕಲ್ ಕಡೆ ಹೋಗುವಾಗ ಯೂನಿಟಿ ಆಸ್ಪತ್ರೆ ರಸ್ತೆಯ ಎಡಬದಿಗೆ ಬರುತ್ತದೆ ಎಂದರೆ ಸರಿ . ನಾನು ಚಲಾಯಿಸುತ್ತಿದ್ದ ವಾಹನ ಜಕಂ ಆಗಿದೆ ಎಂದರೆ ಸರಿ . ನನ್ನ ವಾಹನ ಜಕಂ ಆದ ಬಗ್ಗ ವಿಮಾ ಕಂಪನಿಯಿಂದ ಪರಿಹಾರ ಪಡೆದಿಲ್ಲ .

ನನ್ನ ಅರ್ಜಿಯಲ್ಲಿ ಹಾಗೂ ಮುಖ್ಯವಿಚಾರಣೆಯ ಸಾಕ್ಷ್ಯದ ಪ್ರಮಾಣ ಪತ್ರದಲ್ಲಿ ಈಗಲೂ ನಾನು ಕೆಲಸ ಮಾಡುತ್ತಿದ್ದೆನೆ ಎಂದು ಬರೆಯಿಸಿದ್ದೆನೆ ಎಂದರೆ ಸರಿ . ನಾನು ಕೆಲಸ ಮಾಡುವ ಸಂಸ್ಥೆಯವರು ನನಗಾಗಿರುವ ಗಾಯಗಳ ಅಂಗನ್ಯೂನ್ಯತೆಯಿಂದ ನನ್ನನ್ನು ಕೆಲಸದಿಂದ ತೆಗೆದಿಲ್ಲ . ಅಪಘಾತದ ಪರಿಣಾಮ ನನಗಾಗಿರುವ ಗಾಯಗಳಿಂದ ಕೆಲಸ ಮಾಡಲು ಆಗುತ್ತಿಲ್ಲ ಎಂದು ನಾನು ನನ್ನ ಕೆಲಸವನ್ನು ತ್ಯಜಿಸಿಲ್ಲ .

ಪೊಲಿಸರು ನನ್ನ ಹಾಗೂ ನನ್ನ ಅಜ್ಜಿ ಜಿಜಾಬಾಯಿಯವರ ವಿರುದ್ಧ ದೋಷಾರೋಪಣಾ

ಪತ್ರ ಸಲ್ಲಿಸಿದ್ದಾರೆ ಎಂದರೆ ಸರಿ . ಸದರಿ ಆರೋಪ ಪಟ್ಟಿಯನ್ನು ನಾವು ಪ್ರಶ್ನೆ ಮಾಡಿಲ್ಲ . ನನಗೆ ಅಪಘಾತದಿಂದ ಉಂಟಾದ ಗಾಯಗಳಿಂದ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ನಾನು ಈಗಲೂ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ . ಅಪಘಾತ ನನ್ನ ತಪ್ಪಿನಿಂದ ಆಗಿರುವುದರಿಂದ ನಾನು ಕೇಳಿರುವಂತೆ ಯಾವುದೇ ಪರಿಹಾರ ಪಡೆಯಲು ಭಾದ್ಯಸ್ತನಲ್ಲ ಎಂದರೆ ಸರಿಯಲ್ಲ . ನಮ್ಮ ವಾಹನಕ್ಕೆ ವಿಮೆ ಇಲ್ಲದ ಕಾರಣ ಮತ್ತೊಂದು ವಾಹನದ ವಿಮಾ ಸಂಸ್ಥೆಯಿಂದ ಪರಿಹಾರ ಪಡೆಯಲು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಹಾಜರುಪಡಿಸಿರುವ ಮೆಡಿಕಲ್ ಬಿಲ್ಲುಗಳು ಸೃಷ್ಟಿ ಮಾಡಿ ತಂದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ . ದಸರಿ ಮೆಡಿಕಲ್ ಬಿಲ್ಲುಗಳಲ್ಲಿ ಔಷಧಿ ಅಂಗಡಿಯ ಸಿಲು ಮತ್ತು ಮಾಲೀಕರ ಸಹಿ ಇಲ್ಲ ಎಂದರೆ ಸರಿಯಲ್ಲ .

**ಮರುವಿಚಾರಣೆ** ಃ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.